NWKRTC-PERS0TRFA/1/2022-PERS

I/27793/2022

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ :: ಕೇಂದ್ರ ಕಛೇರಿ :: ಹುಬ್ಬಳ್ಳಿ

(ಆಡಳಿತ / ಸಿಬ್ಬಂದಿ ಇಲಾಖೆ)

ಸಂಖ್ಯೆ: ವಾಕರಸಾಃಕೇಕಃಹುಃಸಿಬ್ಬಂದಿಃಎ-3 / 1905 /2022

ದಿನಾಂಕ : 07-11-2022

ಸುತ್ತೋಲೆ ಸಂಖ್ಯೆಃ **100 /2022**

ವಿಷಯ : ವಿಭಾಗ ಮಟ್ಟದ ವರ್ಗಾವಣೆಯ ಕುರಿತು.

ಉಲ್ಲೇಖ : ಸಂ.ವಾಕರಸಾ/ಕೇಕ/ಹು/ಸಿಬ್ಬಂದಿ/ಎ-3/810 ದಿನಾಂಕ : 31-05-2019

* * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖರಡಿಯ ಪತ್ರದಲ್ಲಿ ಆಡಳಿತಾತ್ಮಕ ಕಾರಣದ ಮೇರೆಗೆ ವಿಭಾಗ ಮಟ್ಟದಲ್ಲಿ ವರ್ಗಾವಣೆ ಮಾಡಲು ಸೂಕ್ತ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಪ್ರಸ್ತುತ ವಿಭಾಗ ಮಟ್ಟದಲ್ಲಿ ಮಾಡಲಾಗುತ್ತಿರುವ ವರ್ಗಾವಣೆಗಳನ್ನು ಅವಲೋಕಿಸಿ ಸದರಿ ನಿರ್ದೇಶನಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಮುಂದುವರೆದು, ವಿಭಾಗ ಮಟ್ಟದಲ್ಲಿ ಕೋರಿಕೆ / ಆಡಳಿತಾತ್ಮಕ ವರ್ಗಾವಣೆ ಮಾಡುವುದನ್ನು ಈ ಕೂಡಲೇ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿದೆ. ಅಮಾನತು ತೆರವು / ನ್ಯಾಯಾಲಯದ ಆದೇಶ / ಬಡ್ತಿ ನಿಯೋಜನೆಯಂತಹ ಅನಿವಾರ್ಯ ಪ್ರಕರಣಗಳನ್ನು ಹೊರತುಪಡಿಸಿ ಯಾವುದೇ ವರ್ಗಾವಣೆ / ಸ್ಥಳ ಬದಲಾವಣೆ / ಪ್ರತಿನಿಯೋಜನೆಗಳನ್ನು ಮಾಡತಕ್ಕದ್ದಲ್ಲ.

ಒಂದುವೇಳೆ ತೀರಾ ಅನಿವಾರ್ಯ ಪ್ರಕರಣವಿದ್ದಲ್ಲಿ ಅಂತಹ ಪ್ರಕರಣದ ಕುರಿತು ವಿವರಗಳೊಂದಿಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಪ್ರಸ್ತಾವನೆ ಕಳುಹಿಸುವುದು. ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ವಿಭಾಗಗಳಿಂದ ಸ್ವೀಕರಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿ ಮಂಡಿಸಿ ಕಡ್ಡಾಯವಾಗಿ ಅನುಮತಿ ಪಡೆಯತಕ್ಕದ್ದು.

ಸುತ್ತೋಲೆ ತಲುಪಿರುವುದಕ್ಕೆ ಸ್ವೀಕೃತಿ ಕಳುಹಿಸುವುದು.

Signed by Bharath S
Date: 10-11-2022 19:27:45

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು:

- ಎಲ್ಲಾ ಇಲಾಖಾ ಮುಖ್ಯಸ್ಥರು, ವಾ ಕ ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ವಾ ಕ ರ ಸಾ ಸಂಸ್ಥೆ / ಕಾರ್ಯ ವ್ಯವಸ್ಥಾಪಕರು, ಪ್ರಾದೇಶಿಕ ಕಾರ್ಯಾಗಾರ, ಹುಬ್ಬಳ್ಳಿ / ಪ್ರಾಂಶುಪಾಲರು, ಪ್ರಾದೇಶಿಕ ತರಬೇತಿ ಕೇಂದ್ರ, ಹುಬ್ಬಳ್ಳಿ / ಕಾರ್ಯ ನಿರ್ವಾಹಕ ಅಭಿಯಂತರು, ವಾಕರಸಾಸಂಸ್ಥೆ, ಬೆಳಗಾವಿ ವಿಭಾಗ ರವರ ಮಾಹಿತಿಗಾಗಿ ಹಾಗೂ ಸದರಿ ಸುತ್ತೋಲೆಯ ನಿರ್ದೇಶನಗಳನ್ನು ತಪ್ಪದೇ ಪಾಲಿಸುವುದು.
- ಮಾನ್ಯ ಉಪಾಧ್ಯಕ್ಷರು / ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿ ರವರ ಮಾಹಿತಿಗೆ ಕಳುಹಿಸಿದೆ.

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು

ಪ್ರತಿಯನ್ನು: ಮುಖ್ಯ ಗಣಕ ವ್ಯವಸ್ಥಾಪಕರು, ರವರ ಮಾಹಿತಿಗಾಗಿ ಹಾಗೂ ಸುತ್ತೋಲೆಯನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ.